# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಕೆಎಸ್‌ಕ್ಯುಎಎಸಿ, ಮಲ್ಲೇಶ್ವರಂ, ಬೆಂಗಳೂರು–560003.

# KARNATAKA SCHOOL EXAMINATION AND ASSESSMENT BOARD

KSQAAC, Malleshwaram, Bengaluru–560003.

## ಮೌಲ್ಯಾಂಕನ – ಮಾರ್ಚ್ 2024 – ಮಾದರಿ ಪ್ರಶ್ನೋತ್ತರ ಪತ್ರಿಕೆ

## Assessment - March 2024 Model Paper

**ತರಗತಿ : 8** | **ವಿಷಯ : ಪ್ರಥಮ ಭಾಷೆ ಕನ್ನಡ** | **ಅಂಕಗಳು : 50**

**ಸಮಯ : 2 ಗಂಟೆ 30 ನಿಮಿಷ**

**ವಿದ್ಯಾರ್ಥಿಗಳು ಭರ್ತಿ ಮಾಡಬೇಕಾಗಿರುವ ಮಾಹಿತಿ**

ವಿದ್ಯಾರ್ಥಿಯ ಹೆಸರು : ____________________

ವಿದ್ಯಾರ್ಥಿಯ SATS ಸಂಖ್ಯೆ : | | | | | | | | | | ವಿದ್ಯಾರ್ಥಿಯ ಸಹಿ : ____________

**ಕೊಠಡಿ ಮೇಲ್ವಿಚಾರಕರು ಭರ್ತಿ ಮಾಡಬೇಕಾಗಿರುವ ಮಾಹಿತಿ**

ಶಾಲೆಯ ಡೈಸ್ ಕೋಡ್ : | | | | | | | | | | | |

ಶಾಲೆಯ ಹೆಸರು : ____________________

ಕ್ಲಸ್ಟರ್ : ____________ ಬ್ಲಾಕ್ : ____________ ಜಿಲ್ಲೆ : ____________

ಶಾಲೆಯ ವಿಧ : ಸರ್ಕಾರಿ ☐ ಅನುದಾನಿತ ☐ ಅನುದಾನ ರಹಿತ ☐

(ಅನ್ವಯಿಸುವ ಮಾಹಿತಿಗೆ "✓" ಗುರುತು ಹಾಕಿರಿ)

ಕೊಠಡಿ ಮೇಲ್ವಿಚಾರಕರ ಸಹಿ : ____________

**ಮೌಲ್ಯಮಾಪನ ಸಮಯದಲ್ಲಿ ಶಿಕ್ಷಕರು ಭರ್ತಿ ಮಾಡಬೇಕಾದ ಮಾಹಿತಿ**

| ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು |
|---|---|---|---|---|---|
| 1 | | 11 | | 21 | |
| 2 | | 12 | | 22 | |
| 3 | | 13 | | 23 | |
| 4 | | 14 | | 24 | |
| 5 | | 15 | | 25 | |
| 6 | | 16 | | 26 | |
| 7 | | 17 | | 27 | |
| 8 | | 18 | | 28 | |
| 9 | | 19 | | 29 | |
| 10 | | 20 | | 30 | |
| – | | – | | 31 | |
| ಒಟ್ಟು ಅಂಕಗಳು | | ಒಟ್ಟು ಅಂಕಗಳು | | ಒಟ್ಟು ಅಂಕಗಳು | |
| | | | | ಒಟ್ಟು ಗಳಿಸಿದ ಅಂಕ | |

ಒಟ್ಟು ಗಳಿಸಿದ ಅಂಕಗಳು (ಅಕ್ಷರಗಳಲ್ಲಿ) ____________________

ಮೌಲ್ಯಮಾಪಕರ ಸಹಿ : ____________

**I.** **1 ರಿಂದ 9 ರವರೆಗಿನ ಪ್ರಶ್ನೆಗಳಿಗೆ ನೀಡಲಾಗಿರುವ ನಾಲ್ಕು ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ನಿಗದಿಪಡಿಸಿರುವ ಸ್ಥಳದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.** **(9 x 1 = 9)**

**1.** **ಕೃಷ್ಣಪ್ಪಯ್ಯನವರೇ, ಅಧಿಕೃತವಾಗಿ ನನ್ನ ಮೊದಲ ಶಿಕ್ಷಕರು.**
**ಈ ವಾಕ್ಯದಲ್ಲಿ 'ಶಿಕ್ಷಕ' ಪದವು :**

A. ಅಂಕಿತನಾಮ B. ರೂಢನಾಮ
C. ಅನ್ವರ್ಥನಾಮ D. ಗುಣವಾಚಕ

ಉತ್ತರ : [ ] ________________

**2.** **ಕೆಲವು ವರ್ಷಗಳ ಹಿಂದೆ ದಿನಪತ್ರಿಕೆಯಲ್ಲಿ ಓದಿದ್ದೆ.**
**ಈ ವಾಕ್ಯದಲ್ಲಿರುವ ತತ್ಸಮ ಪದ :**

A. ಕೆಲವು B. ವರ್ಷ
C. ದಿನಪತ್ರಿಕೆ D. ಓದಿದ್ದೆ

ಉತ್ತರ : [ ] ________________

**3.** **ಡಿ.ವಿ.ಜಿ. ಆಧುನಿಕ ಕನ್ನಡ ಸಾಹಿತ್ಯದ ದಿಗ್ಗಜರಲ್ಲಿ ಒಬ್ಬರು. ಇಲ್ಲಿ 'ದಿಗ್ಗಜರಲ್ಲಿ' ಪದದಲ್ಲಿರುವ ವಿಭಕ್ತಿ :**

A. ಸಪ್ತಮೀ B. ತೃತೀಯಾ
C. ಚತುರ್ಥಿ D. ದ್ವಿತೀಯಾ

ಉತ್ತರ : [ ] ________________

**4.** **ತಲಕಾಡಿನ ವೈದ್ಯೇಶ್ವರ ದೇವಾಲಯಕ್ಕೆ ಸರಿ ಹೊಂದುವ ಕಟ್ಟಡಗಳಾಗಿವೆ. ಇಲ್ಲಿ ಸವರ್ಣದೀರ್ಘಸಂಧಿಗೆ ಉದಾಹರಣೆ :**

A. ತಲಕಾಡು B. ವೈದ್ಯೇಶ್ವರ
C. ಕಟ್ಟಡಗಳು D. ದೇವಾಲಯ

ಉತ್ತರ : [ ] ________________

5. **ಇವುಗಳಲ್ಲಿ 'ದ್ವಿರುಕ್ತಿ' ವ್ಯಾಕರಣಾಂಶವನ್ನು ಹೊಂದಿರುವ ವಾಕ್ಯ :**

A. ಜಪ–ತಪದ ಮಂತ್ರದ ಬಲ್ಮೆಯೆಂ ಕಿಂತಿದೆ.

B. ಹಬ್ಬದ ಭಕ್ಷ–ಭೋಜ್ಯಗಳನ್ನು ವಿತರಣೆ ಮಾಡುವ ಸಂಪ್ರದಾಯವಿತ್ತು.

C. ಗಡಗಡ ನಡುಗಲು ಶುರು ಮಾಡುತ್ತಿದ್ದವು.

D. ಮಕ್ಕಳಿಗೂ ನನಗೂ ಎಲ್ಲೋ ಒಂದೊಂದು ಸಾರಿ ಈ ಕಾಫಿಯ ಪುಣ್ಯ ಸಿಗುತ್ತಿತ್ತು.

ಉತ್ತರ : ☐ ____________________

6. **ಅರ್ಕೇಶ್ವರ ಲಿಂಗ ತಲಕಾಡಿನ ಪಂಚಲಿಂಗಕ್ಕೆ ಸೇರಿದ್ದು.**
**ಇಲ್ಲಿ ಪಂಚಲಿಂಗ ಎಂಬುದು :**

A. ಕರ್ಮಧಾರಯ ಸಮಾಸ

B. ದ್ವಿಗು ಸಮಾಸ

C. ತತ್ಪುರುಷ ಸಮಾಸ

D. ಕ್ರಿಯಾ ಸಮಾಸ

ಉತ್ತರ : ☐ ____________________

7. **ಮಾಧುರ್ಯದಿ ಪಿಕ ತನ್ನನೆ ಮರೆಯುತೆ "ಕುಹೂ! ಕುಹೂ!" ಕೂಗಿತ್ತು!.**
**ಈ ವಾಕ್ಯದಲ್ಲಿ ಬಳಸಿದ ಲೇಖನ ಚಿಹ್ನೆಗಳು :**

A. ಉದ್ಧರಣ–ಭಾವಸೂಚಕ

B. ಅಲ್ಪವಿರಾಮ–ಆವರಣ

C. ಉದ್ಧರಣ–ಪ್ರಶ್ನಾರ್ಥಕ

D. ಭಾವಸೂಚಕ–ಅರ್ಧವಿರಾಮ

ಉತ್ತರ : ☐ ____________________

8. **ಏನೆಲವೊ ನರೆದಲಗ ನೀನು ಸಮಾನನೇ ಎನಗಿಲ್ಲಿ.**
**ಈ ವಾಕ್ಯದಲ್ಲಿ 'ನರೆದಲಗ' ಪದದ ಅರ್ಥ :**

A. ಅಕ್ಕಿ

B. ಗೋಧಿ

C. ರಾಗಿ

D. ನವಣೆ

ಉತ್ತರ : ☐ ____________________

9. ಹತ್ತನೆಯ ಶತಮಾನದವರೆಗೆ ಗಂಗರು ತಲೆಯೆತ್ತಿ ಬಾಳಿದರು. ಈ ವಾಕ್ಯವು :

A. ಸಂಯೋಜಿತ ವಾಕ್ಯ
B. ಮಿಶ್ರ ವಾಕ್ಯ
C. ನಿಷೇಧಾರ್ಥಕ ವಾಕ್ಯ
D. ಸಾಮಾನ್ಯ ವಾಕ್ಯ

ಉತ್ತರ : ______

**II.** ಈ ಕೆಳಗಿನ ಗದ್ಯ/ಪದ್ಯದ ಭಾಗಗಳನ್ನು ಓದಿ, ಗ್ರಹಿಸಿಕೊಂಡು ನೀಡಿರುವ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರ ಆರಿಸಿ ಕ್ರಮಾಕ್ಷರದೊಂದಿಗೆ ಉತ್ತರಿಸಿ. **(7 x 1 = 7)**

10. "ಅಕ್ಕಯ್ಯ, ದೊರೆ ಮನೆಗೆ ತಗೊಂಡು ಹೋಗು. ಅವರು ಹೆಚ್ಚಿಗೆ ಹಣ ಕೊಡುತ್ತಾರೆ. ಅಮ್ಮ ನನಗೋಸ್ಕರ ಯಾವಾಗಲೂ ಕೂಲಿ ಮಾಡುತ್ತಿರುತ್ತಾಳೆ. ಹೆಚ್ಚು ಹಣ ಕೂಡಿ ಹಾಕಿ ಅಮ್ಮನಿಗೆ ತೋರಿಸೋಣ" ಅಂದಳು ಚಿಕ್ಕವಳು. ಇದಕ್ಕೆ ಕಾರಣ :

A. ಹೆಚ್ಚು ಹಣ ಕೂಡಿ ಹಾಕಲು
B. ದೊರೆಗೆ ತೋರಿಸಲು
C. ಅಮ್ಮನಿಗೆ ಕೂಲಿ ಕಳಿಸಲು
D. ದೊರೆಯನ್ನು ಮದುವೆಯಾಗಲು

ಉತ್ತರ : ______

11. ನಾಡಿಗಾಗಿ ತನುವ ತೆತ್ತ ಹುತಾತ್ಮರ ಸ್ಮರಣೆಯಲ್ಲಿ
ನಮ್ಮ ಕಷ್ಟದಲ್ಲು ನೆರೆಗೆ ನೆರಳನೀವ ಕರುಣೆಯಲ್ಲಿ

ಈ ಪದ್ಯದಲ್ಲಿ ಹೇಳಿದಂತೆ ನಾವು ಸ್ಮರಿಸಬೇಕಾಗಿರುವುದು :

A. ಹುತಾತ್ಮರನ್ನು
B. ನಾಡನ್ನು
C. ಬೆಳಕನ್ನು
D. ಭಾರತೀಯರನ್ನು

ಉತ್ತರ : ______

12. "ಐಶ್ವರ್ಯವಂತರ ಅಳಿಯನಾದರೆ ನಾನು ಇಂಗ್ಲೆಂಡಿಗೆ ಸುಲಭವಾಗಿ ಹೋಗಬೇಕಾಗಿತ್ತು. ಆದ್ದುದರಿಂದ ಆ ಬಡವರ ಹುಡುಗಿಯನ್ನು ಮದುವೆಯಾಗಲು ನನಗೆ ಮನಸ್ಸಿರಲಿಲ್ಲ."

ಇಲ್ಲಿ ಯುವಕ ಬಡವರ ಹುಡುಗಿಯನ್ನು ಮದುವೆಯಾಗದಿರಲು ಕಾರಣ :

A. ಹುಡುಗಿ ಐಶ್ವರ್ಯವಂತೆಯಾಗದೆ ಇದ್ದದರಿಂದ　　B. ಇಂಗ್ಲೆಂಡಿಗೆ ಹೋಗಬೇಕಾಗಿದ್ದರಿಂದ

C. ಬ್ಯಾರಿಸ್ಟರನಾಗಬೇಕೆಂದು　　D. ತಂದೆ ಬಳಿ ಹಣ ಇಲ್ಲದಿರುವುದರಿಂದ

ಉತ್ತರ : ______

13. ಜ್ಞಾನಾರ್ಜನೆಗಾಗಿ, ವಿವೇಕ ಸಾಧನೆಗಾಗಿ ಚೀನಾದೇಶದಿಂದ ಪ್ರಯಾಣಿಕನೊಬ್ಬ ಬಂದ ಭರತ ಖಂಡಕ್ಕೆ. ಹಿಯಾನ್‌ತ್ಸಾಂಗ ಎಂಬುದವನ ಹೆಸರು. ಉತ್ತರ ಮೇರುಗಿರಿಗಳೇನು, ಮರುಭೂಮಿಗಳೇನು; ಅವುಗಳನ್ನೆಲ್ಲಾ ದಾಟಿ ಬಂದ.

ಇಲ್ಲಿ ಹಿಯಾನ್‌ತ್ಸಾಂಗ ಭಾರತಕ್ಕೆ ಬಂದಿರುವುದು ಈ ಕಾರಣಕ್ಕೆ :

A. ಜ್ಞಾನಾರ್ಜನೆಗಾಗಿ　　B. ಪ್ರಯಾಣಿಕನಾಗಿ

C. ಮೇರುಗೀರು ನೋಡಲು　　D. ಮರುಭೂಮಿಗಳನ್ನು ನೋಡಲು

ಉತ್ತರ : ______

14. ಸದಾ ಎನ್ನ ಹೃದಯದಲ್ಲಿ ವಾಸಮಾಡೋ ಶ್ರೀಹರಿ ನಾದಮೂರ್ತಿ ಮೋದದಿಂದ ನಿನ್ನ ಪಾದ ಭಜಿಸುವೆ

ಈ ಪದ್ಯದಲ್ಲಿ ವಿಜಯದಾಸರು ಹೇಳಿದಂತೆ ಶ್ರೀಹರಿಯೂ ನೆಲಸಬೇಕಾಗಿರುವುದು :

A. ನಾದದಲ್ಲಿ　　B. ಪಾದದಲ್ಲಿ

C. ಮೋದದಲ್ಲಿ　　D. ಹೃದಯದಲ್ಲಿ

ಉತ್ತರ : ______

15. ಕೆಡೆನುಡಿವ ಕೆಡೆಬಗೆವ ಕೆಡಕು ಜನರೇ ಬನ್ನಿ!
ಕೊಟ್ಟೆವಿದೊ ವೀಳೆಯವನು;
ನಿಮ್ಮೆಲ್ಲರನು ತೊಡೆದು ನಿಮ್ಮ ಮಸಣದ ಮೇಲೆ
ಕಟ್ಟುವೆವು ನಾವು ಹೊಸ ನಾಡೊಂದನು
ಸುಖ ಬೀಡೊಂದನು

ಈ ಪದ್ಯದಲ್ಲಿ ಹೇಳಿದಂತೆ ವೀಳೆಯನ್ನು ಕೊಟ್ಟಿರುವುದು :

A. ಕೇಡನು ನುಡಿದು ಕೇಡನ್ನು ಬಗೆಯುವವನಿಗೆ　　B. ಹೊಸನಾಡು ಕಟ್ಟುವವರಿಗೆ

C. ಸುಖ ಬಯಸುವವರಿಗೆ　　D. ಮಸಣದಲ್ಲಿರುವವರಿಗೆ

ಉತ್ತರ : ______

16. "ಸತ್ತ ಮೇಲಾದರೂ ದೇಹ ಸೇವೆಗೆ ನಿಲಲಿ,
ಇಂದಿಗೀ ನರಜನ್ಮ ಸೇವೆಯೆಂದು
ತನ್ನ ಸ್ವಾರ್ಥವ ನೆನೆದು ವ್ಯರ್ಥವಾಗಿದೆ ದೇಹ,"

ಈ ಸಾಲಿನ ಪ್ರಕಾರ ದೇಹ ವ್ಯರ್ಥವಾಗಿರುವುದು :

A. ಸತ್ತಿದ್ದರಿಂದ
B. ನರಜನ್ಮದಿಂದ
C. ಸೇವೆಯಿಂದ
D. ಸ್ವಾರ್ಥತೆಯಿಂದ

ಉತ್ತರ : ______________________

**III.** ಈ ಕೆಳಗಿನ ಗದ್ಯ/ಪದ್ಯಗಳನ್ನು ಓದಿಕೊಂಡು ಆಯಾಯ ಗದ್ಯ/ಪದ್ಯದ ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. **(4 x 1 = 4)**

17. ಕೆಲವು ವರ್ಷಗಳ ಹಿಂದೆ ದಿನಪತ್ರಿಕೆಯಲ್ಲಿ ಓದಿದ್ದೆ. ಜನಪ್ರಿಯ ಹೋಟೆಲಿನ ಮಾಲಿಕರೊಬ್ಬರು ಬರೆದಿದ್ದರು. ತಂಪು ಪಾನೀಯದ ಕಂಪೆನಿಯೊಂದು ಆತನನ್ನು ಸಂಪರ್ಕಿಸಿ "ನೀವು ಗ್ರಾಹಕರಿಗೆ ಬಂದೊಡನೆ ನೀರು ಕೊಡುವುದನ್ನು ನಿಲ್ಲಿಸಿದರೆ, ಇಷ್ಟು ಹಣ ಕೊಡುವುದಾಗಿ ಹೇಳಿತ್ತಂತೆ! ಈಗಾಗಲೇ ಬೆಂಗಳೂರಿನಲ್ಲೂ ನನಗೆ 'ನೀರು ಕೊಡದ ಸಂಸ್ಕೃತಿ'ಯ ಅನುಭವವಾಗಿದೆ.

ಈ ಗದ್ಯ ಭಾಗದಲ್ಲಿ ಹೇಳಿದಂತೆ ಕಂಪನಿಯ ಉದ್ದೇಶವೇನು ?

______________________

______________________

18. ನನಗೆ ಯಾವುದೂ ತೋಚದಿದೆ
ಅವರ ನೋಡುವ ಪುಣ್ಯ ನನ್ನ ಈ ಕಣ್ಗಳಿಗೆ
ಇರುವುದೋ ಇಲ್ಲವೋ ನಾನರಿಯೆ. ಬಾಲಕನು
ತನ್ನ ತಂದೆಯ ನೋಡಬೇಕೆಂದು ಆಶಿಸಲು
ಬೇಡವೆನ್ನುವುದು ಸರಿಯೇ ಎಂದು ಆಂತರ್ಯ

ಇಲ್ಲಿ ಬಾಲಕನ ಆಸೆ ಏನಾಗಿತ್ತು ?

______________________

______________________

19. ಮನೆಯಲ್ಲಿ ಅಜ್ಜಿಗೂ ಅಮ್ಮನಿಗೂ ಕಿರಿಕಿರಿಯಾದಾಗ ಅಜ್ಜಯ್ಯ ಸೌದೆ ತರುವ ನೆಪ ಮಾಡಿ ಕತ್ತಿ ಹಿಡಿದು ಕಾಡಿಗೆ ನಡೆದು ಬಿಡುತ್ತಿದ್ದರು. ನಾನೂ ಹಠ ಹಿಡಿದು ಅವರ ಜೊತೆ ಹೋಗುತ್ತಿದ್ದೆ.

ಅಜ್ಜಯ್ಯ ಕಾಡಿಗೆ ಹೋಗುತ್ತಿರುವುದಕ್ಕೆ ಕಾರಣವೇನು ?

20. ಹಣ್ಣನೀವ ಕಾಯನೀವ ಪರಿಪರಿಯ ಮರಂಗಳೊ,

ಪತ್ರಮೀವ, ಪುಷ್ಪನೀವ ಲತೆಯ ತರತರಂಗಳೊ

ಈ ಪದ್ಯದ ಪ್ರಕಾರ ಮರ–ಲತೆಗಳು ಏನನ್ನು ನೀಡುತ್ತವೆ ?

**IV.** ಈ ಕೆಳಗಿನ ಗದ್ಯ/ಪದ್ಯಗಳನ್ನು ಓದಿ ಅರ್ಥೈಸಿಕೊಂಡು ಆಯಾಯ ಗದ್ಯ/ಪದ್ಯಗಳ ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. **(6 x 2 = 12)**

21. "ಸುದತ್ತ ಮುನಿ ತನ್ನ ಕೈಯೊಳಗಿನ ಬೆತ್ತವನ್ನು ಸಳನೆಡೆಗೆ ಚಾಚಿ ಹೊಯ್‌ಸಳ ಎಂದು ಆದೇಶವಿತ್ತನೆಂದೂ ಸಳ ಕೂಡಲೇ ಹುಲಿಯನ್ನು ಎದುರಿಸಿ ಅದರ ಗಂಟಲಿನಲ್ಲಿ ಖಡ್ಗವನ್ನು ತುರುಕಿ ಹುಲಿಯನ್ನೂ ಹೊಯ್ದನೆಂದೂ ತಿಳಿಯುವುದು."

ಇಲ್ಲಿ ಸಳ ಹುಲಿಯನ್ನು ಎದುರಿಸಿದ್ದು ಹೇಗೆ ?

22. ಪ್ರಜೆಯಂ ಪಾಲಿಸಬಲ್ಲೊಡಾತನರಸಂ ಕೈಯಾಸೆಯಂ ಮಾಡದಂ ।
ನಿಜಮಂತ್ರೀಶ್ವರ ತಂದೆ ತಾಯ ಸಲಹಲ್ ಬಲ್ಲಾತನೇ ಧಾರ್ಮಿಕಂ ॥
ಭಜಕಂ ದೈವದ ಭಕ್ತಿಯುಳ್ಳೊಡೆ ಭಟಂ ನಿರ್ಭೀತ ತಾನಾದವಂ ।
ದ್ವಿಜನಾಚಾರತೆಯುಳ್ಳವಂ ಹರಹರಾ ಶ್ರೀಚೆನ್ನಸೋಮೇಶ್ವರಾ ॥


ಈ ಪದ್ಯಭಾಗದಲ್ಲಿ ಹೇಳಿರುವಂತೆ ಅರಸ, ಮಂತ್ರಿ, ಧಾರ್ಮಿಕ, ಭಟನ ಲಕ್ಷಣಗಳೇನು ?

23. ಸಾಕಷ್ಟು ಕಾಲಾವಕಾಶ ಇಲ್ಲದೇ ಹೋದರೆ ನನಗಿರುವ ಮಾರ್ಗಗಳು ಎರಡು. ಒಂದು ಬಸ್ ಅಥವಾ ಅಟೋರಿಕ್ಷಾ. ಬಸ್‌ಗಳ ಟೈಮ್ ಅನಿಶ್ಚಿತ ಹಾಗೂ ತುಂಬಾ ಕಾಯಬೇಕಾಗಿದ್ದು ಆ ನೂಕು ನುಗ್ಗಲಲ್ಲಿ ಬಸ್ ಸಂಚಾರ ಬಹಳ ದುಸ್ತರ. ಇನ್ನು ಉಳಿದಿರುವುದು ಒಂದೇ ಮಾರ್ಗ, ಆಟೋರಿಕ್ಷಾ. ನನಗೆ ಅಟೋರಿಕ್ಷಾ ಕಂಡರೆ ತುಂಬಾ ಭಯ. ಅವು ಪಾದರಸದಂತೆ ಚಲಿಸುತ್ತವೆ. ಆದರೆ ಒಂದು ವ್ಯತ್ಯಾಸ. ಪಾದರಸ ತಗ್ಗಿದ್ದ ಕಡೆ ಹೋಗುತ್ತೆ. ಅಟೋರಿಕ್ಷಾಕ್ಕೆ ಅಂತಹ ಸೀಮಿತ ಅಭ್ಯಾಸ, ಉದ್ದೇಶವಿಲ್ಲ. ತಗ್ಗು ಉಬ್ಬುಗಳ ಬೇಧಭಾವವಿಲ್ಲದೆ, ಲಂಗು–ಲಗಾಮಿಲ್ಲದೆ ಕುದುರೆಯಂತೆ ಧಾವಿಸುತ್ತದೆ.

ಲೇಖಕರು ಅಟೋರಿಕ್ಷಾದ ಧಾವಿಸುವಿಕೆ ಕುರಿತು ಏನೆಂದು ಹೇಳಿದ್ದಾರೆ ?

24. ಇಲ್ಲಿ ವಂಚನೆಯಿಲ್ಲ ಚಂಚಲತೆಯಿನಿತಿಲ್ಲ
ಮೇಲು–ಕೀಳುಗಳೆಂಬ ಭೇದವಿಲ್ಲ
ಅಹಮಿಕೆಯ ನೆವಮಿಲ್ಲ ದ್ವೇಷ ಗುಣಮಣಮಿಲ್ಲ
ಸಣ್ಣತನ ಸಂಕೋಚ ಮೊದಲಿಗಿಲ್ಲ
ಮನವು ಬಾನಗಲ, ಎದೆ ಅಳಿಗೊಳದೊಲು
ಭಾವಶುದ್ಧ ಸ್ಫಟಿಕ – ಬೆಳದಿಂಗಳು!

ಈ ಪದ್ಯಭಾಗದ ಪ್ರಕಾರ ಗೆಳೆಯರ ಮನಸ್ಸಿನ ಭಾವನೆ ಹೇಗಿರುತ್ತದೆ ? ವಿವರಿಸಿ.

25. 

ಈ ಚಿತ್ರವನ್ನಾಧರಿಸಿ ಶಾಲೆಗಳಲ್ಲಿ ಯಾವ ರೀತಿ ಶಿಕ್ಷಣ ನೀಡಬಹುದು ವಿವರಿಸಿರಿ.

---

---

---

---

26. ಡಿವಿಜಿ ಮೊಂಡಾದರೆ ವಿಶ್ವೇಶ್ವರಯ್ಯ ಜಗಮೊಂಡು. ಇದು ನನ್ನ ವೈಯಕ್ತಿಕ ಕೆಲಸ. ನನಗೆ ಇದಕ್ಕೆ ಹಣ ಬರುತ್ತದೆ. ನೀವು ತೆಗೆದುಕೊಳ್ಳಲೇ ಬೇಕು. ಇಲ್ಲದಿದ್ದರೆ ಮುಂದೆ ನಿಮ್ಮ ಸಹಾಯವೇ ಬೇಡ ಎಂದು ಕೋಪಿಸಿಕೊಂಡರು. ಆಯಿತು; ತೆಗೆದುಕೊಳ್ಳಲು ಡಿವಿಜಿ ಒಪ್ಪಿದರು. ಮುಂದೆ ವಿಶ್ವೇಶ್ವರಯ್ಯ ಅವರಿಗೆ ಪ್ರತಿಸಲವೂ ಚೆಕ್ಕು ಕೊಡುತ್ತಾ ಹೋದರು. ಡಿವಿಜಿ ಪಡೆಯುತ್ತಾ ಹೋದರು. ಆದರೆ ಆ ಚೆಕ್ಕುಗಳು ಬ್ಯಾಂಕಿನ ಮೆಟ್ಟಿಲನ್ನು ಹತ್ತಿದರೆ ತಾನೆ? ಹಣವನ್ನು ಸರ್ಕಾರದ ಸಹಾಯವನ್ನು ಇಷ್ಟು ಉದಾಸೀನ ಮಾಡಿದ ವ್ಯಕ್ತಿ ಎಂಥ ಶ್ರೀಮಂತರಿದ್ದರಿರಬಹುದು.

ಡಿವಿಜಿಯವರು ಸರ್ಕಾರದ ಹಣವನ್ನು ಉದಾಸೀನ ಮಾಡಿದ ರೀತಿ ಹೇಗಿತ್ತು ?

---

---

---

---

V. ಈ ಕೆಳಗೆ ಕೊಟ್ಟಿರುವ ಗದ್ಯಪದ್ಯಗಳನ್ನು ಓದಿ ಅರ್ಥೈಸಿಕೊಂಡು ಆಯಾಯ ಗದ್ಯಪದ್ಯಗಳ ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ. **(1 x 3 = 3)**

27. ಮುದ್ದಣ ಕವಿಯು ತನ್ನ ರಾಮಾಶ್ವಮೇಧ ಕೃತಿಯಲ್ಲಿನ ಸಪ್ತಾಕ್ಷರಿ ಮಂತ್ರ ಕುರಿತು ವರ್ಣಿಸುತ್ತಾನೆ. ಅದರಲ್ಲಿ ಹಾಸ್ಯಮಯವಾಗಿ ಮನೋರಮೆಗೆ ಸಂವಾದ ಮಾಡುತ್ತಾನೆ. ಅದರಲ್ಲಿನ ಒಂದು ಭಾಗ ಹೀಗಿದೆ :

ಮನೋರಮೆ : (ಅರೆಮುನಿಸಿ) ಪೋ ಮಾಣೆಲೆ ರಮಣ!
ನಿನ್ನ ನುಡಿಯಂ ಸಾಜಂ ನಿಕ್ಕಮಮೆಂದೇ
ಬಗೆದನೀ ತೇರಿನ ಮಾಟದ ಕವರು ನುಡಿಯ
ಕೊಂಕೆಂಬುದನರಿಯದಾದೆಂ. ನೀಂ ಕಬ್ಬಿಗನೋ,
ಸಬ್ಬವಕಾರನೊ! ನಿನ್ನೀ ಕಬ್ಬದ ಸೊಗಸನೆಮ್ಮನ್ನರಪ್ಪ
ಜಾಣೆಲಿವೆಣ್ಗಳೆ ಕೊಂಡಾಡುವರಲ್ಲದೆ ಬಲ್ಲರೇನೊಲ್ವರೆ?

ಮುದ್ದಣ್ಣ : ಸಾಲ್ಗುಮೀ ಪರಿಹಾಸಂ. ಮಂಗತೆಯಂ ಕೇಳ್.

ಸಂದರ್ಭ : "ಸಾಲ್ಗುಮೀ ಪರಿಹಾಸಂ"

VI. ಈ ಕೆಳಗಿನ ಕವಿಯ ಸ್ಥಳ, ಕಾಲ. ಕೃತಿಗಳು ಬಿರುದುಗಳ ಕುರಿತು ವಾಕ್ಯರೂಪದಲ್ಲಿ ಪರಿಚಯ ಬರೆಯಿರಿ. **(1 x 3 = 3)**

**28.** ಕನಕದಾಸರು

ಸುಳಿವುಗಳು: ಬನ್ನಪಟ್ಟಣ, ಶ್ರೀರಂಗವಿಠಲ, ಹಾವೇರಿ ಜಿಲ್ಲೆ, ಅಬ್ಬೂರು ಗ್ರಾಮ, ಬಾಡಗ್ರಾಮ, 1508 ಕಾಗಿನೆಲೆಯಾದಿ ಕೇಶವ, ಹರಿಭಕ್ತಿಸಾರ, ಸುಳಾದಿಗಳು, ಉಗಾಭೋಗಗಳು, ದಂಡಕಗಳು, ಮೋಹನ ತರಂಗಿಣಿ, ರಾಮಧಾನ್ಯ ಚರಿತೆ, ಮೂಲ ಹೆಸರು, ಲಕ್ಷ್ಮೀನಾರಾಯಣ, ತಿಮ್ಮಪ್ಪ, ಅಶ್ವಿನಿ ದೇವತೆಗಳು, ದಾಸ ಸಾಹಿತ್ಯ, 1404ರಿಂದ 1502, ನಾಯಕ,

**VII.** ಈ ಕೆಳಗೆ ಕೊಟ್ಟಿರುವ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಸಮನ್ವಯಗೊಳಿಸಿ ಬರೆಯಿರಿ. **(1 x 3 = 3)**

**29.** ಮನೋರಮೆಯ ಮುಖ ಕಮಲದಂತೆ ಅರಳಿತು.

ಉಪಮೇಯ :

ಉಪಮಾನ :

ಉಪಮಾವಾಚಕ :

ಸಮಾನ ಧರ್ಮ :

ಅಲಂಕಾರ :

ಸಮನ್ವಯ :

ಲಕ್ಷಣ :

**VIII.** ಈ ಕೆಳಗಿನ ಪದ್ಯದ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : **(1 x 4 = 4)**

30. ಕಾಯಕದಲ್ಲಿ ನಿರತನಾದೊಡೆ
ಗುರುದರ್ಶನವಾದಡೂ ಮರೆಯಬೇಕು;
ಲಿಂಗಪೂಜೆಯಾದಡೂ ಮರೆಯಬೇಕು
ಜಂಗಮ ಪೂಜೆಯಾದಡೂ ಮರೆಯಬೇಕು
ಕಾಯಕವೆ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು
– ಆಯ್ದಕ್ಕಿ ಮಾರಯ್ಯ

**IX.**

**31.** ನಿಮ್ಮನ್ನು ವಿಜಯಪುರ ಜಿಲ್ಲೆಯ ಇಂಡಿ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಶಶಿಧರ/ಶಶಿಕಲಾ ಎಂದು ಭಾವಿಸಿಕೊಂಡು ನಿಮ್ಮೂರಿಗೆ ಸಾರ್ವಜನಿಕ ಗ್ರಂಥಾಲಯವನ್ನು ಮಂಜೂರು ಮಾಡುವಂತೆ ಕೋರಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಬರೆಯಿರಿ. **(1 x 5 = 5)**

ಇವರಿಂದ,

ಇವರಿಗೆ,

ಮಾನ್ಯರೇ,
ವಿಷಯ:

ಈ ಮೂಲಕ

ದಿನಾಂಕ:
ಸ್ಥಳ: